5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂ:10038/2021

ಪಿಡಬ್ಲ್ಯೂ 06
ಸಿಡಬ್ಲ್ಯೂ 07

| | | |
|---|---|---|
| ಸಾಕ್ಷಿ ಹೆಸರು | - | ಚಂದ್ರಪ್ಪ |
| ತಂದೆ ಹೆಸರು | - | ಬಂಗಾರಪ್ಪ |
| ವಯಸ್ಸು | - | 45 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸ: | - | ತಾವರೆಹಳ್ಳಿ, ಸೊರಬ ತಾಲ್ಲೂಕು. |

ಪ್ರಮಾಣ ವಚನ ಭೋದಿಸಿದ ದಿನಾಂಕ: 19-12-2022.

<u>ಮುಖ್ಯ ವಿಚಾರಣೆ: ಮಾನ್ಯ ಸರಕಾರಿ ಅಭಿಯೋಜಕರವರಿಂದ:</u>

ಪ್ರಾ ಸಾ -5 ನನ್ನ ಮಗಳು, ಚಾಸಾ-2 ನನ್ನ ಅಳಿಯ. ಪ್ರಾ ಸಾ -1 ನನ್ನ 2 ನೇ ಅಳಿಯ. ಚಾಸಾ-8 ನನ್ನ ಬೀಗ , ಚಾಸಾ-9 ನನ್ನ ಬೀಗಿತಿ. ಈಗ್ಗೆ 7 ವರ್ಷಗಳ ಕೆಳಗೆ ಪ್ರಾ ಸಾ5 ರವರನ್ನು ಚಾಸಾ-2 ರವರಿಗೆ ಕೊಟ್ಟು ಮದುವೆ ಮಾಡಿರುತ್ತೇವೆ. ಮದುವೆಯ ನಂತರ ಪ್ರಾ ಸಾ -5 ಮತ್ತು ಚಾಸಾ-2 ರವರು ಅನ್ಯೋನ್ಯವಾಗಿರುತ್ತಾರೆ. ಆರೋಪಿತರು ನನ್ನ ಅಳಿಯನ ಊರಾದ ಸಾರೇಕೊಪ್ಪ ಗ್ರಾಮದವರು.

ನಾನು ದಿನಾಂಕ:09-06-2019 ರಂದು ನಾನು ನನ್ನ ಮಗಳ ಊರಾದ ಸಾರೇಕೊಪ್ಪಕ್ಕೆ ಹೋಗಿದ್ದೆನು. ನನ್ನ ಅಳಿಯನ 1 ಎಕರೆ ಜಮೀನಿನಲ್ಲಿ ಅಡಿಕೆ ಮತ್ತು ಬಾಳೆ ಬೆಳೆಯನ್ನು ಬೆಳೆದಿದ್ದರು. ಸದರಿ ಜಮೀನು ಬಗರ್ಹುಕುಂ ಜಮೀನು ಆಗಿರುತ್ತದೆ. ಸದರಿ ತೋಟಕ್ಕೆ ಮೊದಲು ಸಾದಾ ಬೇಲಿ ಇತ್ತು, ನಂತರ ಸದರಿ ಹಳೆ ಬೇಲಿಯನ್ನು ತೆಗೆದು ತಂತಿ ಬೇಲಿ ಹಾಕಲು ನಿರ್ಧರಿಸಿದ್ದರು. ನನ್ನ ಅಳಿಯನ ತೋಟದ ಪಕ್ಕದಲ್ಲಿ ಪರಸಪ್ಪ ರವರ ಜಮೀನು ಇರುತ್ತದೆ. ನನ್ನ ಅಳಿಯನ ತೋಟಕ್ಕೆ ಮೊದಲು ಸಾದಾ ಬೇಲಿ ಇದ್ದದ್ದರಿಂದ ಪರಸಪ್ಪರವರ ದನಗಳು ಬಂದು

ಗಿಡಗಳನ್ನು ತಿಂದು ಹಾಳು ಮಾಡುತ್ತಿದ್ದವು. ಅವರ ದನಗಳು ಬಂದು ಹಾಳು ಮಾಡುತ್ತಿದ್ದುದರಿಂದ ನನ್ನ ಅಳಿಯಂದಿರು ಪರಸಪ್ಪರವರಿಗೆ ನಿಮ್ಮ ದನಗಳನ್ನು ಬಿಡಬೇಡಿ ಎಂದು ಹೇಳಿರುತ್ತಾರೆ.

ಆ ದಿನ ಪ್ರಾ ಸಾ -1 ಮತ್ತು ಚಾ ಸಾ -2 ರವರು ಹೊರಗಡೆ ಕೆಲಸಕ್ಕೆ ಹೋಗಿದ್ದರು. ಅವರು ಹೊರಗಡೆ ಕೆಲಸಕ್ಕೆ ಹೋದ ನಂತರ ಪರಸಪ್ಪನ ಕಡೆಯವರು ಬೇಲಿಯನ್ನು ಸುಟ್ಟು ಹಾಕಿರುತ್ತಾರೆ. ಅವರು ಸದರಿ ಬೇಲಿಗೆ ಬೆಂಕಿ ಹಾಕಿದ್ದರಿಂದ ಸುಮಾರು 100 ಅಡಿಕೆ ಮತ್ತು ಬಾಳೆ ಗಿಡಗಳು ಸುಟ್ಟು ಹೋಗಿರುತ್ತವೆ. ಪ್ರಾ ಸಾ -1 ಮತ್ತು ಚಾ ಸಾ -2 ರವರು ಕೆಲಸ ಮುಗಿಸಿಕೊಂಡು ಸಂಜೆ 7-30 ಗಂಟೆಗೆ ಮನೆಗೆ ಬಂದಿರುತ್ತಾರೆ. ನಂತರ ಪ್ರಾ ಸಾ -1 ಮತ್ತು ಚಾ ಸಾ -2 ರವರು ಮನೆಗೆ ಬಂದ ನಂತರ ಬಾಳೆ ಗಿಡಗಳು ಸುಟ್ಟು ಹೋದ ವಿಷಯ ಗೊತ್ತಾಯಿತು. ವಿಷಯ ಗೊತ್ತಾದ ನಂತರ ಪ್ರಾ ಸಾ -1 ಮತ್ತು ಚಾ ಸಾ -2 ರವರು ಸದರಿ ವಿಷಯವನ್ನು ಕೇಳಲು ಮಳ್ಳಿ ರಮೇಶಪ್ಪ ರವರ ಮನೆಗೆ ಕೇಳಲು ಹೋಗಿರುತ್ತಾರೆ. ಪ್ರಾ ಸಾ -1 ಮತ್ತು ಚಾ ಸಾ -2 ರವರು ಹೋದ ಸ್ವಲ್ಪ ಸಮಯದ ನಂತರ ನಮಗೆ ಗಲಾಟೆಯ ಶಬ್ದ ಕೇಳಿಸಿತು. ಸದರಿ ಗಲಾಟೆಯ ಶಬ್ದ ರಮೇಶಪ್ಪರವರ ಮನೆಗೆ ಹೋಗುವ ಹಾದಿಯಲ್ಲಿ ಕೇಳಿಸಿತು. ಆಗ ನಾನು , ಚಾಸಾ-8 , ಚಾಸಾ-9 ಮತ್ತು ನನ್ನ ಮಗಳು ಪ್ರಾ ಸಾ -5 ರವರು ರಮೇಶಪ್ಪನ ಮನೆಯ ಎದುರು ರಸ್ತೆಯಲ್ಲಿ ಹೋಗಿ ನೋಡಿದಾಗ ಗಲಾಟೆಯಾಗುತ್ತಿದ್ದು ಸ್ಥಳದಲ್ಲಿ 1 ರಿಂದ 9 ನೇ ಆರೋಪಿತರು ಇದ್ದರು. ಸದರಿ 1 ರಿಂದ 9 ನೇ ಆರೋಪಿತರು ಗಲಾಟೆ ಮಾಡಲು ದೊಣ್ಣೆ ಮತ್ತು ಕಲ್ಲುಗಳನ್ನು ತೆಗೆದುಕೊಂಡು ಪ್ರಾ ಸಾ -1 ಮತ್ತು ಚಾಸಾ-2 ರವರನ್ನು ಹೊಡೆದು ಸಾಯಿಸುವ ಉದ್ದೇಶದಿಂದ ಬಂದಿದ್ದರು. 1 ರಿಂದ 9 ನೇ ಆರೋಪಿತರು ಪ್ರಾ ಸಾ -1 ಮತ್ತು ಚಾಸಾ-2 ರವರಿಗೆ ನಿಮ್ಮನ್ನು ಕೊಂಡು ಹಾಕುತ್ತೇವೆ , ಕೊಲೆ ಮಾಡುತ್ತೇವೆ ಎಂದು ಹೇಳಿ ಹೊಡೆದಿರುತ್ತಾರೆ.

3 ನೇ ಆರೋಪಿ ಕಲ್ಲಿನಿಂದ ಚಾ ಸಾ-2 ರವರ ತಲೆಗೆ ಹೊಡೆದಿರುತ್ತಾನೆ. ಇದರಿಂದ ಚಾಸಾ -2 ರವರ ತಲೆಗೆ ಪೆಟ್ಟಾಗಿರುತ್ತದೆ. ಆಗ ಚಾಸಾ-2 ಕುಸಿದು ಬಿದ್ದಿರುತ್ತಾನೆ. ಚಾಸಾ-2 ಬಿದ್ದ ನಂತರ ಉಳಿದ ಆರೋಪಿಗಳು ಸಹ ಆತನಿಗೆ ಹಲ್ಲೆ ಮಾಡಿರುತ್ತಾರೆ. ಪ್ರಾ ಸಾ -1 ರವರಿಗೂ ಸಹ ತಲೆಗೆ ಪೆಟ್ಟಾಗಿರುತ್ತದೆ. ಪ್ರಾ ಸಾ -1 ರವರಿಗೆ ಸಹ ಪರಸಪ್ಪ ಹಲ್ಲೆ ಮಾಡಿರುತ್ತಾರೆ. ನಾನು

ಗಲಾಟೆಯನ್ನು ಬಿಡಿಸಲು ಹೋದ ಸಮಯದಲ್ಲಿ ಅರೋಪಿತರಲ್ಲದೇ ಇತರರು ಯಾರು ಇರಲಿಲ್ಲ. ನಾವು ಜಗಳ ಬಿಡಿಸಲು ಹೋದಾಗ ಆರೋಪಿತರು ನಿನ್ನನ್ನು ಸಹ ಕೊಲೆ ಮಾಡುತ್ತೇವೆ ಎಂದು ಹೇಳಿರುತ್ತಾರೆ.

ನಂತರ ಚಾಸಾ-2 ರವರನ್ನು ಅಂಬ್ಯುಲೆನ್ಸ್ ನಲ್ಲಿ ಸೊರಬದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಶಿವಮೊಗ್ಗದ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ. ನನ್ನ ಅಳಿಯ ಚಾಸಾ-2 ರವರಿಗೆ ಚಿಕಿತ್ಸೆ ಕೊಡಿಸಿದ್ದರೂ ಸಹ ಆತ 6 ತಿಂಗಳ ಕಾಲ ಕೋಮಾ ಸ್ಥಿತಿಯಲ್ಲಿ ಇದ್ದನು. ಈಗಲೂ ಸಹ ಆತನಿಗೆ ಮಾತನಾಡಲು ಬರುತ್ತಿಲ್ಲ.

ಚಾಸಾ-2 ರವರಿಗೆ ಮತ್ತು ಪ್ರಾ ಸಾ -1 ರವರಿಗೆ ಆರೋಪಿತರು ಹೊಡೆಯಲು ಉಪಯೋಗಿಸಿದ ಕಲ್ಲುಗಳನ್ನು ಮತ್ತು ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ದೊಣ್ಣೆ ಮತ್ತು ಎರಡು ಕಲ್ಲುಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಮು ಮಾ -1 ರಿಂದ ಮು ಮಾ -3 ಎಂದು ಗುರುತಿಸಲಾಗಿದೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 1 ರಿಂದ 9 ನೇ ಆರೋಪಿತರು ನ್ಯಾಯಾಲಯದ ಮುಂದೆ ಹಾಜರು ಇದ್ದು ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೋಲೀಸರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ಪ್ರಾ ಸಾ -1 ಮತ್ತು ಚಾಸಾ-2 ರವರ ಬಗರ್ ಹುಕುಂ ಜಾಗದ ಪಕ್ಕದಲ್ಲಿ 1 ನೇ ಆರೋಪಿ ಮಳ್ಳಿ ರಾಜಪ್ಪ ರವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ, ಪರಸಪ್ಪ ರವರ

ಜಮೀನು ಇದೆ ಎಂದು ನುಡಿಯುತ್ತಾರೆ. ಸದರಿ ಜಮೀನಿಗೆ 1 ನೇ ಆರೋಪಿಯ ದನ ಕರುಗಳು ಬಂದು ಹಾಳುಮಾಡುತ್ತಿತ್ತು ಎಂದರೆ ಉತ್ತರಿಸದೇ ಸುಮ್ಮನಿರುತ್ತಾರೆ. ಪ್ರಾ ಸಾ -1 ಮತ್ತು ಚಾಸಾ-2 ರವರು ಕೆಲಸಕ್ಕೆ ಹೋದಾಗ 1 ನೇ ಆರೋಪಿ ಸದರಿ ಬೇಲಿಗೆ ಬೆಂಕಿ ಹಾಕಿ ಸುಟ್ಟಿರುತ್ತಾರೆ ಎಂದರೆ ಸಾಕ್ಷಿಯು ಉತ್ತರಿಸದೇ ಸುಮ್ಮನೆ ನಿಂತಿರುತ್ತಾರೆ. ಆ ದಿನ ಪ್ರಾ ಸಾ -1 ಮತ್ತು ಚಾಸಾ-2 ರವರಿಗೆ ವಿಷಯ ಗೊತ್ತಾದಾಗ ವಿಚಾರಿಸಲು 1 ನೇ ಆರೋಪಿಯ ಮನೆಗೆ ಹೋಗಿರುತ್ತಾರೆ ಎಂದರೆ ಹೌದು. ನಾವು ಗಲಾಟೆ ಕೇಳಿ ನೋಡಲು ಹೋದಾಗ ಹುಣಸೇಕೊಪ್ಪದ ಮಂಜುನಾಥರವರ ಮನೆಯ ಎದುರು ಗಲಾಟೆಯಾಗುತ್ತಿತ್ತು ಎಂದರೆ ಹೌದು. ಆರೋಪಿಗಳು ಪ್ರಾ ಸಾ -1 ಮತ್ತು ಚಾಸಾ-2 ರವರನ್ನು ರಸ್ತೆಯಲ್ಲಿ ಅಡ್ಡಗಟ್ಟಿ ಏನ್ರೋ ಸೂಳೆ ಮಕ್ಕಳ ನಮ್ಮ ಮನೆತನದವರನ್ನು ಎದುರು ಹಾಕಿಕೊಂಡು ನಮ್ಮ ಊರಿನಲ್ಲಿ ಜೀವನ ಮಾಡುತ್ತೀರ ಎಂದು ಬೈದು ನಿಮ್ಮನ್ನು ನೋಡಿಕೊಳ್ಳುತ್ತೇವೆ ಎಂದು ಕೂಗಿಕೊಳ್ಳುತ್ತಿದ್ದರು ಎಂದರೆ ಹೌದು. ಚಾಸಾ-2 ರವರು ಕುಸಿದು ಬಿದ್ದಾಗ ಮಳ್ಳಿ ರಾಜಪ್ಪ , ಪರಸಪ್ಪ ರವರು ಸೇರಿ ಕೈಗಳಿಂದ ಚಾಸಾ-2 ರವರಿಗೆ ಹೊಡೆದು ಕಾಲಿನಿಂದ ಒದ್ದಿರುತ್ತಾರೆ ಎಂದರೆ ಹೌದು. 4 ನೇ ಆರೋಪಿಯು ಪ್ರಾ ಸಾ -1 ರವರ ಎರಡೂ ಕೈಗಳನ್ನು ಹಿಡಿದುಕೊಂಡಿದ್ದ ಆಗ 6 ನೇ ಆರೋಪಿಯು ಪ್ರಾ ಸಾ -1 ರವರ ಹಿಂದೆಲೆಗೆ ಹೊಡೆದಿದ್ದ ಎಂದರೆ ಹೌದು. 7 ನೇ ಆರೋಪಿಯು ಪ್ರಾ ಸಾ -1 ರವರಿಗೆ ಕಲ್ಲಿನಿಂದ ಹೊಡೆದು ರಕ್ತಗಾಯಪಡಿಸಿದ್ದ ಎಂದರೆ ಹೌದು. ಆ ಸಮಯದಲ್ಲಿ ನಾವಲ್ಲದೇ ಸಾರೇಕೊಪ್ಪ ಗ್ರಾಮದ ರೆಡ್ಡಿ ಪ್ರಭಾಕರ , ಗಂಗೆ ಪ್ರವೀಣ , ಮಹಾದೇವ , ಪ್ರಾ ಸಾ -1 ರವರ ಮನೆಯವರು ಸೇರಿ ಜಗಳ ಬಿಡಿಸಿದರು ಎಂದರೆ ಹೌದು.

ನಮ್ಮ ಊರು ತಾವರೆಹಳ್ಳಿ. ಆರೋಪಿತರು ಸಾರೇಕೊಪ್ಪದವರಾಗಿದ್ದು ನನಗೆ ಅವರ ಪರಿಚಯ ಇದೆ ಆದರೆ ಅವರ ಹೆಸರು ಗೊತ್ತಿಲ್ಲ. ನಾನು ಬೇರೆ ಊರಿನವನಾಗಿದ್ದರಿಂದ ಪ್ರಾ ಸಾ-1 ಮತ್ತು ಚಾಸಾ2 ರವರ ಮನೆಯ ಪಕ್ಕದಲ್ಲಿ 1 ನೇ ಆರೋಪಿಯ ದನಕರುಗಳು ಬಂದು ಚಾಸಾ-2 ರವರ ತೋಟವನ್ನು ಹಾಳು ಮಾಡಿದ್ದು ಅವರ ಹೆಸರು ಗೊತ್ತಿಲ್ಲದೇ ಇರುವ ಕಾರಣ ನಾನು ಪರಸಪ್ಪ ಎಂದು ಹೇಳಿರುತ್ತೇನೆ ಎಂದರೆ ಹೌದು.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).